2) ಹೊಸದುರ್ಗ ತಾಲ್ಲೂಕಿನ ಬಲ್ಲಾಳ ಸಮುದ್ರ, ತಂಡಗ ಮತ್ತೋಡು, ಕಾರೇಹಳ್ಳಿ, ಸಾಣಹಳ್ಳಿ, ಬರಗೂರು, ಹೆಬ್ಬಳ್ಳಿ ಸೇರಿದಂತೆ ಒಟ್ಟು 16 ಗ್ರಾಮ ಪಂಚಾಯತ್‌ಗಳಲ್ಲಿ 3394 ಹೆಕ್ಟೇರಿನಲ್ಲಿ ವಿವಿಧ ಬೆಳೆಗಳಲ್ಲಿ ಕೆಂಪುತಲೆ ಕಂಬಳಿಹುಳು ಬಾಧಿಸಿದ್ದು, ಸುಮಾರು 3500 ಕೆ.ಜಿ.ಹುಳುಗಳನ್ನು ಕೈಯಿಂದ ಆರಿಸಿ ನಾಶಪಡಿಸಲಾಗಿದೆ. ಇದಕ್ಕಾಗಿ ಉದ್ಯೋಗ ಭರವಸೆ ಯೋಜನೆಯಡಿ ರೂ.1.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

3) ಇದಲ್ಲದೆ ಜಿಲ್ಲಾವಲಯ ಯೋಜನೆಯಡಿ ರೂ.60,000-00ಗಳನ್ನು ಹೊಸದುರ್ಗ ತಾಲ್ಲೂಕಿಗೆ ಬಿಡುಗಡೆ ಮಾಡಿದ್ದು, ಇದರಲ್ಲಿ ಬಾಧೆಗೊಳಪಟ್ಟ ಪ್ರದೇಶದಲ್ಲಿ ಶೇ.2ರ ಮೀಥೈಲ್‌ಪ್ಯಾರಾಥಿಯಾನ್ 6.45 ಟನ್‌ಗಳನ್ನು ರೈತರ ಮುಖಾಂತರ ಧೂಳೀಕರಿಸಲಾಗಿದೆ.

ಹೊಸದುರ್ಗ ತಾಲ್ಲೂಕಿನಲ್ಲಿ ಕಂದಾಯ ಮಾಫಿ ಮಾಡುವ ಬಗ್ಗೆ

933 - ಶ್ರೀ ಟಿ. ಹೆಚ್. ಬಸವರಾಜು (ಹೊಸದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕು ಮಳೆಯ ಅಭಾವದಿಂದ ಬರಗಾಲ ಪ್ರದೇಶವೆಂದು ಘೋಷಿಸಲಾಗಿದೆಯೇ?

ಆ) ಕೇವಲ ಬರಗಾಲಕ್ಕೆ ಒಳಗಾದ ಕಸಬಾ ಮೂಡದಕೆರೆ ಹೋಬಳಿಗಳ ರೈತರಿಗೆ ಕಂದಾಯ ಮಾಫಿ ಮಾಡಲಾಗಿದೆಯೇ? (ವಿವರ ನೀಡುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) 1995-96ನೇ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕನ್ನು ಬರಗಾಲ ಪ್ರದೇಶವೆಂದು ಘೋಷಿಸಿರುವುದಿಲ್ಲ.

ಆ) ಪರಿಶೀಲನೆಯಲ್ಲಿದೆ.

ತೋಟಗಾರಿಕೆ ತೆಂಗಿನ ಬೆಳೆ ಕುರಿತು

934 - ಶ್ರೀ ಬಿ.ಹೆಚ್. ಬಸವರಾಜ್ (ಹೊಸದುರ್ಗ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ತೆಂಗಿನ ಮರಗಳು ರೋಗದಿಂದ ಹಾಳಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ರೈತರಿಗೆ ಪರಿಹಾರ ಕೊಡುವ ಬಗ್ಗೆ ತೀರ್ಮಾನವಾಗಿದೆಯೇ?

ಇ) ಹಾಗಿದ್ದರೆ ಪ್ರತಿ ತೆಂಗಿನ ಗಿಡಕ್ಕೆ ನೀಡುವ ಪರಹಾರವೇನು?